ಬರುತ್ತಿದ್ದ ಬೆಳಕಿನಲ್ಲಿ ಆ ಹಳೆಯ ಪತ್ರಿಕೆಗಳನ್ನು ಓದುತ್ತಾ ಮೈ ಮರೆಯುತ್ತಿದ್ದುದು ಒಂದು ಅದ್ಭುತ ಅನುಭವ! ಚಂದಮಾಮ ಕಥೆಗಳಲ್ಲಿ ಬರುವ ರಾಕ್ಷಸರು, ಮಾಟಗಾತಿ – ಮಂತ್ರವಾದಿಗಳು, ಬೇತಾಳ ಪಿಶಾಚಿಗಳೆಲ್ಲರೂ ಅಲ್ಲೇ ಮೇಲ್ಮೆತ್ತಿನಲ್ಲೇ ನೆಲೆಯಾಗಿ ನಡು ಹಗಲಿನಲ್ಲಿಯೂ ಧಡಭಡ... ದುಡುದುಡು... ಓಡಾಡುತ್ತಾ ಯುದ್ಧಮಾಡಿಕೊಂಡಿರುತ್ತಿದ್ದರು! ನಾನು ಯೌವನಕ್ಕೆ ಕಾಲಿಟ್ಟ ಮೇಲೆ ಧೋ... ಎಂದು ಸುರಿಯುವ ಮಳೆಗಾಲದಲ್ಲಿ ಇದೇ ಮೇಲ್ಮೆತ್ತಿನ ಮೆಟ್ಟಿಲ ಮೇಲೆ ಕುಳಿತು ಮಲ್ಲಿಗೆ, ಪ್ರಜಾಮತ ಮತ್ತು ರಾಗಸಂಗಮ ಪತ್ರಿಕೆಗಳಲ್ಲಿ ಉಷಾ ನವರತ್ನರಾಮ್, ಸಾಯಿಸುತೆ ಬರೆದ ಪ್ರೇಮಕತೆಗಳನ್ನು ಓದುತ್ತಿರುವಾಗ ಈ ರಕ್ಕಸರೆಲ್ಲರೂ ಕನಸಿನ ರಾಜಕುಮಾರರಾಗಿ ಬದಲಾಗಿದ್ದರು!

ಈಗ ಮತ್ತೆ ಮೆತ್ತಿನ ಮೆಟ್ಟಿಲಿಳಿದು ಕೆಳಗೆ ಬಂದರೆ ಚೌಕಿಯ ದೇವರ ಗೂಡಿನ ಮತ್ತೊಂದು ತುದಿಯಲ್ಲಿರುವುದೇ ಕಪ್ಪಡಿಗೆಮನೆ. ಅದಕ್ಕೆ ಯಾಕೆ ಆ ಹೆಸರು ಅಂದರೆ, ಶತಮಾನಗಳಷ್ಟು ಹಳೆಯದಾದ ಈ ಮನೆಯಲ್ಲಿ ನಮ್ಮಜ್ಜ ವಾಸಕ್ಕೆ ಬಂದಾಗ ಅದೇ ಅಡಿಗೆ ಕೋಣೆಯಾಗಿತ್ತಂತೆ. ಎಲ್ಲಿಯೂ ಒಂದು ಬೆಳಕಿನ ಕಿರಣವೂ ನುಸುಳಿ ಬರದಂತೆ ಹಗಲಿನಲ್ಲಿಯೂ ಕತ್ತಲು ತುಂಬಿಕೊಂಡಿರುತ್ತಿದ್ದ ಈ ಅಡಿಗೆಮನೆ ಕ್ರಮೇಣ ಮನೆಯವರ ಬಾಯಲ್ಲಿ ಕಪ್ಪಡಿಗೆಮನೆಯಾಗಿತ್ತು. ಅಲ್ಲಿ ಅಡಿಗೆ ಮಾಡುವವರ ಕಷ್ಟ ಮನಗಂಡ ಅಜ್ಜ, ಹಿತ್ತಲಕಡೆಯ ಒಳದಲ್ಲಿ ಬೇರೆ ಅಡಿಗೆಮನೆ ಮಾಡಿಸಿದರಂತೆ. ನಂತರ ಅದು ಹಳೆಯ ಸಾಮಾನುಗಳನ್ನು, ಮತ್ತೆ ಕಾಳುಕಡಿಗಳನ್ನು ತುಂಬಿಡುವ ಸ್ಟೋರ್ ರೂಮ್ ಆಗಿ ಬದಲಾಗಿ, ಮನೆಯ ಮಕ್ಕಳು ಹಟ ಮಾಡಿದಾಗ ಕಪ್ಪಡಿಗೆಮನೆಯಲ್ಲಿ ಕೂಡಿ ಹಾಕುತ್ತೇನೆ ಎಂದು ಹೆದರಿಸುವ ತಾಣವಾಗಿತ್ತು.

